ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಹೌದು.

ಆ) ನಕಾಶೆಗಳನ್ನು ಮುದ್ರಿಸಲು ಸುಮಾರು ೨೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಧುನಿಕ ಯಂತ್ರವನ್ನು ಖರೀದಿಸಲಾಗುತ್ತದೆ.

ಇ) ನೂತನವಾಗಿ ಪಡೆಯುವ ಯಂತ್ರದ ಮೂಲಕ ಅಗತ್ಯವಿರುವಷ್ಟು ನಕಾಶೆಗಳ ಪ್ರತಿಗಳನ್ನು ತಯಾರಿಸಿ ರೈತರಿಗೆ ಒದಗಿಸುವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ. ಪಿ. ವೆಂಕಟೇಶ್.—ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಮೊದಲನೇ ಪ್ರಶ್ನೆಗೆ ಹೌದು ಎಂದು ಉತ್ತರ ನೀಡಿದ್ದಾರೆ. ಎರಡನೇ ಪ್ರಶ್ನೆಗೆ ನಕಾಶೆಗಳನ್ನು ಮುದ್ರಿಸಲು ಸುಮಾರು ೨೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಧುನಿಕ ಯಂತ್ರವನ್ನು ಖರೀದಿಸಲಾಗುತ್ತಿದೆ. ಎಂದು ಹೇಳಿದ್ದಾರೆ. ಯಾವಾಗ ಖರೀದಿ ಮಾಡುತ್ತಾರೆ ಎಂದು ನಾನು ಕೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಖರೀದಿಸಲಾಗುತ್ತದೆ ಎಂದ ಹೇಳಿದರೆ ಕೂಡಲೇ ಖರೀ ಮಾಡ ಬೇಕು ಎಂದು ಸರ್ಕಾರದ ಯೋಜನೆ. ಇವೊತ್ತು ಹೊಂದ ಕೂಡಲೇ ಖರೀದಿ ಮಾಡಲು ಆಗಡಿ ಯೊಳಗೆ ಸಕ್ಕರೆ ಸಿಕ್ಕ ಹಾಗೆ ಸಿಗುತ್ತದೆಯೇ ? ಮೆಷಿನರಿ ತಯಾರಾಗಬೇಕು. ಅದು ಸ್ಪೆಷಲ್ ಟೈಪ್ ಆಫ್ ಮೆಷನರಿ ಇದೆ. ಹೆಚ್.ಎಂ.ಟಿ.ನವರು ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಎಷ್ಟು ಲಘು ಸಾಧ್ಯವಿದೆ ಅಷ್ಟು ಬೇಗ ಖರೀದಿ ಮಾಡುತ್ತೇನೆ. ಮೆಷಿನರಿಗೆ ಆರ್ಡರ್ ಕೊಟ್ಟಿದ್ದೇವೆ. ವಿಶಿಷ್ಟ ತರಗತಿ ಮೆಷನರಿ ಇರುವುದರಿಂದ ಮಾರ್ಕೆಟ್‌ನಲ್ಲಿ ಲಭ್ಯ ಆಗುವ ಮೆಷನರಿ ಅಲ್ಲ. ನಕಾಶೆಗಳು ತೆಗೆಯಬೇಕಾಗಿದೆ. ಹೊಸದಾಗಿ ಈಗ ಕಂಪ್ಯೂಟರೈಸೇಷನ್‌ನೊಳಗೆ ಸಹಿತ ತೆಗೆಯಬೇಕೆಂದು ಬಂದಿದೆ. ಮಧ್ಯ ಪ್ರದೇಶದವರು ಅದನ್ನು ಹಾಕಿದ್ದಾರೆ. ಮಧ್ಯ ಪ್ರದೇಶಕ್ಕೆ ನಾನು ಅಧಿಕಾರಿಗಳನ್ನು ಕಳಿಸಿ ಪರೀಕ್ಷೆ ಮಾಡುತ್ತೇನೆ. ಅದು ಸೂಕ್ತ ಆದರೆ ಅದನ್ನು ಮಾಡೋಣ. ಇಲ್ಲದಿದ್ದರೆ ನಮ್ಮ ಹೆಚ್.ಎಂ.ಟಿ. ನವರು ತಯಾರು ಮಾಡತಕ್ಕ ಮೆಷಿನರಿ ಅನ್ನು ತೆಗೆದುಕೊಳ್ಳಿಣ.

ಶ್ರೀ ಎಂ ಪಿ ವೆಂಕಟೇಶ್.—ಇದರಿಂದ ರೈತರಿಗೆ ಬಹಳ ತೊಂದರೆ ಆಗಿದೆ. ಸರ್ಕಾರ ಕೂಡಲೇ ಪ್ರಯತ್ನ ಮಾಡಿ ತರಿಸಿ ಸಾರ್ವಜನಿಕರಿಗೆ ಮತ್ತು ರೈತರಿಗೆ ಕೂಡಲೇ ಸಹಾಯ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ರೈತರಿಗೆ ಅಷ್ಟೆ ಅಲ್ಲ ಆಫೀಸರ್‌ಗಳಿಗೂ ಸಹ ಇದರಿಂದ ಬಹಳ ತೊಂದರೆ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ನಿಜವಾಗಿಯೂ ತೀವ್ರಗತಿಯಿಂದ ಈ ಬಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಜಿ. ರಾಜು (ಸಹಕಾರ ಸಚಿವರು).—ಮಾನ್ಯ ಉಪಾಧ್ಯಕ್ಷಣಿಯವರೇ, ೪೯೯ (೧೫೧೯ಕ್ಕೆ) ಪ್ರಶ್ನೆ ಸಂಖ್ಯೆ ಸ್ವಲ್ಪ ಟೈಮ್ ಬೇಕು.

ಉಪಾಧ್ಯಕ್ಷರು.—ಇದನ್ನು ಮುಂದಕ್ಕೆ ಹಾಕಲಾಗಿದೆ.

ರಾಜ್ಯದ ಪ್ರತಿಹಳ್ಳಿಗಳಲ್ಲಿ ಗೋಮಾಳ ಭೂಮಿಯ ವಿಸ್ತೀರ್ಣ

೫೦೦ (೧೪೧೦ ಬಿ) ಶ್ರೀ ನಾರಯಣ ಮನೋಳಿ (ಬೀದರ್).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಪ್ರತಿಗ್ರಾಮದಲ್ಲಿ ಗೋವುಗಳು ಮೇಯಲು "ಗೋಮಾಳ" ವೆಂದು ನಿಗಧಿಪಡಿಸಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಗೋಮಾಳವು ಸಾಕಷ್ಟಿದೆಯೇ ?

ಇ) ಇಲ್ಲದಿದ್ದಲ್ಲಿ, ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುತ್ತದೆ. ?

ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಸಚಿವರು).—

ಅ) ಪ್ರತಿ ಹಳ್ಳಿಯಲ್ಲಿ ರಾಸುಗಳು ಮೇಯಲು ಪ್ರತಿ ನೂರು ರಾಸುಗಳಿಗೆ ಹನ್ನೆರಡು ಹೆಕ್ಟೇರ್ ನಂತೆ (೩೦ ಎಕರೆ) ಮೀಸಲಿಡಬೇಕಾಗಿದೆ.

ಆ) ಇಲ್ಲ.

ಇ) ಗೋಮಾಳವು ಸಾಕಷ್ಟು ಇಲ್ಲದಿರುವಲ್ಲಿ, ಎಲ್ಲೆಲ್ಲಿ ಕಾಡುಗಳಿವೆಯೋ, ಅದನ್ನೇ ಗೋಮಾಳ ವೆಂದು ಉಪಯೋಗಿಸಲಾಗುತ್ತಿದೆ.

ಶ್ರೀ ನಾರಾಯಣರಾವ್ ಮನೋಳಿ.—ಮಾನ್ಯ ಉಪಾಧ್ಯಕ್ಷಿಣಿಯವರೆ, ಇಲ್ಲಿ ಉತ್ತರದಲ್ಲಿ ಹೇಳಿದ್ದಾರೆ, ರೆವಿನ್ಯೂ ಕಾನೂನು ಪ್ರಕಾರ ಪ್ರತಿ ಊರಿಗೆ ೩೦ ಎಕರೆ ಭೂಮಿ ಗೋಮಾಳ ಎಂದು ಕಾಯ್ದಿರಿಸಲಾಗಿದೆ ಎಂದು ಆದರೆ ಇದು ನಿಜವೇ ಎಂದು ಸರ್ಕಾರದವರು ಸರ್ವೆ ಮಾಡಿಸಬೇಕು ಏಕೆಂದರೆ ಸಾಕಷ್ಟು ದಿವಸ ಆದರೂ ಇನ್ನೂ ಸರ್ವೆ ಆಗಿಲ್ಲ. ಎಲ್ಲಾ ಕಡೆ ರೆವಿನ್ಯೂ ಲ್ಯಾಂಡ್‌ಗಳಿದ್ದು ಸರ್ವೆ ಮಾಡಿದರೆ ಅನೇಕ ಕಡೆ ಮೂವತ್ತು ಎಕರೆ ಜಮೀನು ಇಲ್ಲವೆಂದು ಸರ್ಕಾರದ ಗಮನಕ್ಕೆ ಬರುತ್ತದೆ. ಎಲ್ಲಿ ಗೋಮಾಳ ಇಲ್ಲ ಅಂತಹ ಜಾಗದಲ್ಲಿ ಫಾರೆಸ್ಟ್ ಲ್ಯಾಂಡ್ ಬೆಳೆಸಿಕೊಳ್ಳಬಹುದೆಂದು ಇಲ್ಲಿ ಹೇಳಿದ್ದಾರೆ. ಆದರೆ ಅಲ್ಲಿ ಏನು ಇದೆ. ಸೆಂಟ್ರಲ್ ರಿಸರ್ವ್ ಫಾರೆಸ್ಟ್ ಮತ್ತು ಸ್ಟೇಟ್ ರಿಸರ್ವ ಫಾರೆಸ್ಟ್ ಎಂದು ಎರಡು ಭಾಗ ಮಾಡಿದ್ದಾರೆ. ಅಂತಹ ಭೂಮಿಯಲ್ಲಿ ಈ ಜಾನುವಾರುಗಳು ಹೋದರೆ. ಅವರಿಗೆ ದಂಡ ಹಾಕುವಂತಹ ಅನೇಕ ಸನ್ನಿವೇಶಗಳನ್ನು ನಾವು ನೋಡಿದ್ದೇವೆ. ಆದರ ಸಲುವಾಗಿ ಕಟ್ಟುನಿಟ್ಟಾಗಿ ಯಾವ ಕ್ರಮ ಸರ್ಕಾರ ಹಾಕಿಕೊಳ್ಳುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಜಾನುವಾರು ಮೇಯಿಸಲು ಹೋದಾಗ ದಂಡ ಹಾಕಿದ್ದು ನಮ್ಮ ನಜರಿಗೆ ಬಂದಿಲ್ಲ. ಆದರೆ ರಿಸರ್ವ್ ಫಾರೆಸ್ಟ್ ಏನು ಇರುತ್ತದೆ. ಅಲ್ಲಿ ಹೋದರೆ ಕಟ್ಟಿಗೆಗಳನ್ನು ನಾಶ ಮಾಡುತ್ತಾರೆ, ಫಾರೆಸ್ಟ್ ನಾಶ ಮಾಡುತ್ತಾರೆ ಎಂದು ಅವರ ಮೇಲೆ ದಂಡ ಹಾಕುತ್ತಾರೆ, ಆದರೆ ಉಳಿದಕಡೆ ಬರಲು ಪ್ರದೇಶದಲ್ಲಿ ಎಲ್ಲಿ ದನಗಳನ್ನು ಸಹ ಮೇಯಿಸಲು ಬರುತ್ತದೆ, ಅಲ್ಲಿ ದಂಡ ಹಾಕಿದ್ದು ನನ್ನ ಗಮನಕ್ಕೆ ಬಂದಿಲ್ಲ ಬಂದರೆ ನಾನು ಫಾರೆಸ್ಟ್ ಮಿನಿಸ್ಟರ್ ಕೂಡ ಮಾತನಾಡಿ ಆ ಬಗ್ಗೆ ವಿಚಾರ ಮಾಡುತ್ತೇನೆ. ಇನ್ನು ತಾವು ಮತ್ತೊಂದು ವಿಚಾರ ಹೇಳಿದಿರಿ. ಕರ್ನಾಟಕ ಭೂ ಕಂದಾಯ ೬೮,೭೭ರ ನಿಯಮಗಳ ಪ್ರಕಾರ ಪ್ರತಿ ಹಳ್ಳಿಗಳಲ್ಲಿ ಒಂದು ನೂರು ರಾಸುಗಳಿಗೆ ೧೨ ಹೆಕ್ಟೇರ್ ಸರ್ಕಾರಿ ಜಮೀನು ಗೋಮಾಳಕ್ಕಾಗಿ ಎಂದು ನಿಗದಿ ಪಡಿಸಬೇಕಾಗಿದೆ. ಈ ಜಮೀನನ್ನು ಅನಧಿಕೃತವಾಗಿ ಒತ್ತುವರಿ ಮಾಡಿರುವುದರಿಂದ ಅನೇಕ ಗ್ರಾಮಗಳಲ್ಲಿ ರಾಸುಗಳು ಮೇಯಲು. ಗೋಮಾಳಗಳು ಸಾಕಷ್ಟು ಇರುವುದಿಲ್ಲ. ಕರ್ನಾಟಕ ಭೂ ಕಂದಾಯ ನಿಯಮಗಳ ೬೬ ನಿಯಮ ೯೭(೨) ರಂತೆ ಗೋಮಾಳ ಸಾಕಷ್ಟು ಇಲ್ಲದೆ ಇರುವಂತಹ ಗ್ರಾಮಗಳಲ್ಲಿ ಆ ಗ್ರಾಮದ ಅರಣ್ಯವನ್ನೇ ಗೋಮಾಳವನ್ನಾಗಿ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಫಾರೆಸ್ಟ್ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತೇನೆ.

ತುಂಡು ಭೂಮಿ ಕಾಯಿದೆ

೫೦೧ (೧೫೯೯) ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) ಶ್ರೀ ಯು. ಕೆ. ಶಾಮಣ್ಣ (ಶೃಂಗೇರಿ) ಶ್ರೀ ಎನ್ ಬಿ. ನಂಜಪ್ಪ (ಶ್ರವಣಬೆಳಗೊಳ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ರಾಜ್ಯದಲ್ಲಿ ತುಂಡು ಭೂಮಿ ಕಾಯಿದೆ ಎಂದಿನಿಂದ ಜಾರಿಗೆ ಕೊಡಲಾಯಿತು?

ಆ) ಈ ಕಾಯಿದೆಯ ಆನುಷ್ಠಾನದಿಂದ ೨ ಎಕರೆ ಜಮೀನು ಹೊಂದಿರುವ ಸಣ್ಣ ಹಾಗೂ ಬಡ ಕುಟುಂಬದ ರೈತರಿಗೆ ಖಾತೆಯ ವರ್ಗಾವಣೆಮಾಡಿಸುವಲ್ಲಿ ಅನಾನುಕೂಲವಾಗುತ್ತಿರುವುದು ನಿಜವೆ?

ಇ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ಹಾಗೂ ಈ ಕಾಯಿದೆಗೆ ತಿದ್ದುಪಡಿ ತರಲಾಗುವುದೇ ?